**All India Radio: Bangalore**
**National Bulletin In Kannada**
**18.07.2025 1.10 p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**18.07.2025 1.10 p.m.**
**<><><><>**

ಮುಖ್ಯಾಂಶಗಳು

1. ಬಿಹಾರದಲ್ಲಿಂದು ೭ ಸಾವಿರದ ೨೦೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
2. ಅಲ್ಲಾಹಾಬಾದ್ ಹೈಕೋರ್ಟ್‌ನಲ್ಲಿ ಶ್ರೀ ಕೃಷ್ಣ ಜನ್ಮಭೂಮಿ- ಶಾಹಿ ಈದ್ಗಾ ವಿವಾದದ ಮಹತ್ವದ ವಿಚಾರಣೆ ಇಂದು
3. ೩೨ನೇ ಆವೃತ್ತಿಯ ಸಿಂಗಾಪೂರ್- ಭಾರತ ದ್ವಿಪಕ್ಷೀಯ ಕಡಲ ಸಮರಾಭ್ಯಾಸ - ಸಿಂಬೆಕ್ಸ್ ನಲ್ಲಿ ಪಾಲ್ಗೊಳ್ಳಲಿರುವ ಭಾರತೀಯ ನೌಕಾಪಡೆ
4. ಚೆಸ್ ಫ್ರೀಸ್ಟೈಲ್ ಗ್ರ್ಯಾಂಡ್ ಸ್ಲ್ಯಾಮ್ ಟೂರ್ನಿ; ಸೆಮಿಫೈನಲ್ ಪ್ರವೇಶಿಸಿದ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬಿಹಾರಕ್ಕೆ ಭೇಟಿ ನೀಡಿದ್ದು, ಪೂರ್ವ ಚಂಪಾರಣ್ ಜಿಲ್ಲೆಯ ಮೊತಿಹಾರಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಅವರು ೭ ಸಾವಿರದ ೨೦೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದರು. ಹಾಗೂ ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ರೈಲು, ರಸ್ತೆ, ಗ್ರಾಮೀಣಾಭಿವೃದ್ಧಿ, ಮೀನುಗಾರಿಕೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು. ರೈಲು ಸಂಪರ್ಕವನ್ನು ಉತ್ತೇಜಿಸುವ ಸಲುವಾಗಿ, ಪ್ರಧಾನಿ ನಾಲ್ಕು ಹೊಸ ಅಮೃತ್ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ಅದರಲ್ಲಿ ರಾಜೇಂದ್ರ ನಗರ ಟರ್ಮಿನಲ್-ನವದೆಹಲಿ, ಬಾಪುಧಾಮ್ ಮೊತಿಹಾರಿ-ಆನಂದ್ ವಿಹಾರ್, ದರ್ಭಾಂಗಾ-ಲಖನೌ ಹಾಗೂ ಮಾಲ್ಡಾ ಟೌನ್-ಲಖನೌ ನಡುವಿನ ರೈಲು ಸೇವೆಗಳು ಸೇರಿವೆ. ೫೮೦ ಕೋಟಿ ರೂಪಾಯಿ ವೆಚ್ಚದ ದರ್ಭಾಂಗಾ-ಸಮಸ್ತಿಪುರ ಡಬ್ಬಲಿಂಗ್ ಯೋಜನೆ, ಸಮಸ್ತಿಪುರ-ಬಚ್ವಾರ ನಡುವೆ ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆ, ಪಟ್ನಾದ ಪಾಟಲೀಪುತ್ರದಲ್ಲಿ ವಂದೇ ಭಾರತ್ ರೈಲುಗಳ ನಿರ್ವಹಣಾ ಕೇಂದ್ರ ಸೇರಿದಂತೆ ಹಲವು ರೈಲು ಕಾಮಗಾರಿಗಳಿಗೆ ಚಾಲನೆ ಸೇರಿವೆ. ರಸ್ತೆ ಅಭಿವೃದ್ಧಿಯ ಭಾಗವಾಗಿ ರಾಷ್ಟ್ರೀಯ ಹೆದ್ದಾರಿ-೩೧೯ರ ಅರಾ ಬೈಪಾಸ್ ಹಾಗೂ ಪರಾರಿಯಾ-ಮೊಹನಿಯಾ ಭಾಗದ ಚತುಷ್ಪಥ ರಸ್ತೆಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಲಾಗುತ್ತಿದೆ. ಬಿಹಾರ-ಝಾರ್ಖಂಡ್ ಸಂಪರ್ಕ ಸುಲಭಗೊಳಿಸಲು ಸರ್ವಾನ್-ಚಕಾಯಿ ಭಾಗದ ಎರಡು ಮಾರ್ಗದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ವಲಯವನ್ನು ಉತ್ತೇಜಿಸಲು ದರ್ಭಾಂಗಾ ಮತ್ತು ಪಟ್ನಾದಲ್ಲಿನ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ ಹಾಗೂ ಸ್ಟಾರ್ಟಪ್ ಇನ್‌ಕ್ಯೂಬೇಶನ್ ಸೌಲಭ್ಯಗಳ ಉದ್ಘಾಟನೆ ನಡೆಯಿತು. ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ನವೀನ ಮೀನುಗಾರಿಕಾ ಕೇಂದ್ರ, ಬಯೋ ಫ್ಲಾಕ್ ಘಟಕಗಳು, ಅಲಂಕಾರಿಕ ಮೀನು ಕೃಷಿ ಘಟಕಗಳು ಸೇರಿದಂತೆ ಮೀನುಗಾರಿಕೆ ಯೋಜನೆಗಳ ಉದ್ಘಾಟನೆ ನಡೆಯಿತು. ಇದರ ಜೊತೆಗೆ ಪ್ರಧಾನಿ, ದೀನದಯಾಳ್ ಅಂತ್ಯೋದಯ ಯೋಜನಾ- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ೬೧ ಸಾವಿರ ಸ್ವಸಹಾಯ ಗುಂಪುಗಳಿಗೆ ೪೦೦ ಕೋಟಿ ನೆರವು ಬಿಡುಗಡೆಗೊಳಿಸಲಾಯಿತು. ೧೨ ಸಾವಿರ ಮನೆಗಳ ಗೃಹ ಪ್ರವೇಶ, ಮತ್ತು ಪ್ರಧಾನ

ಮಂತ್ರಿ ಆವಾಸ್ ಗ್ರಾಮೀಣ ಯೋಜನೆಯಡಿ ೪೦ ಸಾವಿರ ಫಲಾನುಭವಿಗಳಿಗೆ ೧೬೦ ಕೋಟಿ ರೂಪಾಯಿ ಬಿಡುಗಡೆ ಮಾಡಿ ಆವಾಸ್ ಯೋಜನೆಯಡಿ ಕಾರ್ಯಕ್ರಮದಲ್ಲಿ ೫ ಫಲಾನುಭವಿಗಳಿಗೆ ಪ್ರಧಾನಿ ಸಾಂಕೇತಿಕವಾಗಿ ಕೀಲಿಕೈ ವಿತರಿಸಿದರು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಮಧ್ಯಾಹ್ನ ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ೫ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಹಲವು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡಲಿದ್ದು, ಕೆಲವು ಯೋಜನೆಗಳನ್ನು ಉದ್ಘಾಟಿಸಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಪಶ್ಚಿಮ ಬಂಗಾಳದ ಬಂಕುರಾ ಮತ್ತು ಪುರೂಲಿಯಾ ಜಿಲ್ಲೆಗಳಲ್ಲಿನ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಯೋಜನೆಯಿಂದ ಮನೆಮನೆಗಳಿಗೆ, ವ್ಯಾಪಾರ ಸಂಸ್ಥೆಗಳಿಗೆ ಹಾಗೂ ಕೈಗಾರಿಕೆಗೆ ಸಂಪರ್ಕ ಒದಗಿಸಲಾಗುವುದು. ಜೊತೆಗೆ ಚಿಲ್ಲರೆ ಮಾರುಕಟ್ಟೆ ಕೇಂದ್ರಗಳಲ್ಲಿ ಸಿಎನ್‌ಜಿ ಲಭ್ಯವಾಗುವುದು ಹಾಗೂ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಪ್ರಧಾನಮಂತ್ರಿ ಅವರು ದುರ್ಗಾಪುರ-ಹಾಲ್ದಿಯಾ ನೈಸರ್ಗಿಕ ಅನಿಲದ ಪೈಪ್‌ಲೈನ್ ಯೋಜನೆಯ ಭಾಗವಾಗಿರುವ ದುರ್ಗಾಪುರ-ಕೊಲ್ಕತಾ ೧೩೨ ಕಿ.ಮೀ ಉದ್ದದ ಪೈಪ್‌ಲೈನ್ ವಿಭಾಗವನ್ನೂ ರಾಷಕ್ಕೆ ಸಮರ್ಪಿಸಲಿದ್ದಾರೆ. ಈ ಯೋಜನೆ ಪ್ರಧಾನಮಂತ್ರಿ ಉರ್ಜಾ ಗಂಗಾ ಯೋಜನೆ ಎಂಬ ಹೆಸರಿನಿಂದಲೂ ಪರಿಚಿತವಾಗಿದೆ. ಅವರು ದುರ್ಗಾಪುರ ಸ್ಟೀಲ್ ತಾಪಮಾನ ವಿದ್ಯುತ್ ಸ್ಥಾವರ ಮತ್ತು ರಘುನಾಥಪುರ ತಾಪಮಾನ ವಿದ್ಯುತ್ ಸ್ಥಾವರಗಳಲ್ಲಿ ಹಳೆಯ ಮಾಲಿನ್ಯ ನಿಯಂತ್ರಣ ವ್ಯವಸ್ಥೆಗೆ ಪರ್ಯಾಯವಾಗಿ ಅಳವಡಿಸಲಾಗಿರುವ ಫ್ಲೂ ಗ್ಯಾಸ ಡಿ-ಸಲ್ಫರೈಸೇಷನ್ ತಂತ್ರಜ್ಞಾನವನ್ನೂ ರಾ?ಕ್ಕೆ ಸಮರ್ಪಿಸಲಿದ್ದಾರೆ. ಇದೇ ವೇಳೆ, ಪುರೂಲಿಯಾ ಜಿಲ್ಲೆಯ ಪುರೂಲಿಯಾ-ಕೊಟ್ಶಿಲಾ ರೈಲು ಮಾರ್ಗದ ೩೬ ಕಿ.ಮೀ ಉದ್ದದ ಡಬ್ಲಿಂಗ್ ಯೋಜನೆಯನ್ನೂ ಅವರು ದೇಶಕ್ಕೆ ಸಮರ್ಪಿಸಲಿದ್ದಾರೆ. ಅದೇ ರೀತಿ, ಸೆತು ಭಾರತಮ್ ಯೋಜನೆ ಅಡಿಯಲ್ಲಿ ಪಶ್ಚಿಮ ಬರ್ಧಮಾನ್ ಜಿಲ್ಲೆಯ ಟೊಪ್ಸಿ ಮತ್ತು ಪಂಡಬೇಶ್ವರ್‌ನಲ್ಲಿ ನಿರ್ಮಿಸಲಾಗಿರುವ ಎರಡು ರಸ್ತೆ ಮೇಲ್ಸೇತುವೆಗಳನ್ನೂ ಪ್ರಧಾನಮಂತ್ರಿ ಉದ್ಘಾಟಿಸಲಿದ್ದಾರೆ.

<><><><>

ಶ್ರೀ ಕೃಷ್ಣ ಜನ್ಮಭೂಮಿ - ಶಾಹಿ ಈದ್ಗಾ ಮಸೀದಿ ವಿವಾದದ ಸಂಬಂಧಿಸಿದಂತೆ ಮಹತ್ವದ ವಿಚಾರಣೆ ಇಂದು ಮಧ್ಯಾಹ್ನ ೨ ಗಂಟೆಗೆ ಅಲ್ಲಹಾಬಾದ್ ಹೈಕೋರ್ಟ್‌ನಲ್ಲಿ ನಡೆಯಲಿದೆ. ದಶಕಗಳಿಂದ ನಡೆಯುತ್ತಿರುವ ಈ ವಿವಾದಕ್ಕೆ ಸಂಬಂಧಿಸಿದಂತೆ ೧೮ ಅರ್ಜಿಗಳು ವಿಚಾರಣೆಗೆ ಬರಲಿದ್ದು, ಎಲ್ಲಾ ಅರ್ಜಿಗಳನ್ನು ಒಂದುಗೂಡಿಸಿ ಸಂಯುಕ್ತವಾಗಿ ಕೇಳಬೇಕೆಂಬ ವಿಶೇಷ ಮನವಿಯೂ ನ್ಯಾಯಾಲಯದ ಮುಂದೆ ಇರಲಿದೆ. ಅರ್ಜಿದಾರ ವಕೀಲ ಮಹೇಂದ್ರ ಪ್ರತಾಪ್ ಸಿಂಗ್, “ಈ ವಿವಾದದ ವಿಚಾರಣೆಯನ್ನು ತ್ವರಿತಗೊಳಿಸಬೇಕೆಂಬ ವಿನಂತಿಯಿದೆ. ಶಾಹಿ ಈದ್ಗಾ ಪಕ್ಷದವರು ವಿಳಂಬ ಮಾಡಲು ಯತ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಈ ವಿವಾದದಲ್ಲಿ ಹಿಂದೂಪರ ಅರ್ಜಿದಾರರು ಶಾಹಿ ಈದ್ಗಾ ಮಸೀದಿ, ಶ್ರೀಕೃಷ್ಣನ ಜನ್ಮಸ್ಥಳದ ಮೇಲೆ ನಿರ್ಮಿಸಲಾಗಿದೆ ಎಂಬ ಆರೋಪ ಮಾಡಿದ್ದು, ಮುಸ್ಲಿಂಪರ ಪಾಲುದಾರರು ಇದನ್ನು ನಿರಾಕರಿಸುತ್ತಿದ್ದಾರೆ. ಇನ್ನು 'ಹಿಂದೂ ಚೇತನ ಯಾತ್ರೆ' ಬಗ್ಗೆ ಮುಸ್ಲಿಂ ಪಕ್ಷ ನೀಡಿರುವ ಆಕ್ಷೇಪ ನ್ಯಾಯಾಲಯದಲ್ಲಿಂದು ಚರ್ಚೆಗೆ ಬರುವ ಸಾಧ್ಯತೆ ಇದೆ. ಇಂದಿನ ನ್ಯಾಯಾಲಯದ ನಿರ್ಧಾರ, ವಿವಾದದ ಮುಂದಿನ ಹಾದಿಗೆ ಮಹತ್ವಪೂರ್ಣ ಪರಿಣಾಮ ಬೀರುವ ಸಾಧ್ಯತೆಯಿದೆ.

<><><><>

ಈ ತಿಂಗಳ ಕೊನೆಯಲ್ಲಿ ಸಿಂಗಾಪುರದಲ್ಲಿ ನಡೆಯಲಿರುವ ೩೨ನೇ ಆವೃತ್ತಿಯ ಸಿಂಗಾಪೂರ್- ಭಾರತ ದ್ವಿಪಕ್ಷೀಯ ಕಡಲ ಸಮರಾಭ್ಯಾಸ - ಸಿಂಬೆಕ್ಸ್ ನಲ್ಲಿ ಭಾರತೀಯ ನೌಕಾಪಡೆಯು ಭಾಗವಹಿಸಲಿದ್ದು, ಇದು ಭಾರತೀಯ ನೌಕಾಪಡೆ ಮತ್ತು ಸಿಂಗಾಪುರ ಗಣರಾಜ್ಯದ ನೌಕಾಪಡೆಯ ನಡುವಿನ ವಾರ್ಷಿಕ ಅಭ್ಯಾಸವಾಗಿದೆ. ಸಿಂಗಾಪುರದಲ್ಲಿ ಭಾರತದ ಹೈಕಮಿಷನರ್ ಶಿಲ್ಪಾಕ್ ಅಂಬುಲೆ ಅವರು ಈ ಅಭ್ಯಾಸವನ್ನು ಭಾರತದ ಅತ್ಯಂತ ದೀರ್ಘಕಾಲಿಕ, ನಿರಂತರ ನೌಕಾ ಅಭ್ಯಾಸಗಳಲ್ಲಿ ಒಂದೆಂದು ಬಣ್ಣಿಸಿದ್ದಾರೆ. ಈ ಅಭ್ಯಾಸವು ಭಾರತದ "ಸಾಗರ್ ದೃಷ್ಟಿಕೋನ" ಹಾಗೂ ಆಕ್ಟ್ ಈಸ್ಟ್ ನೀತಿಗೆ

ಪೂರಕವಾಗಿದ್ದು, ಪ್ರಾದೇಶಿಕ ಸಹಕಾರ ಮತ್ತು ಸಮುದ್ರ ಭದ್ರತೆ ಒತ್ತು ನೀಡುತ್ತದೆ. ಮಾನವೀಯ ಸಹಕಾರ ಮತ್ತು ವಿಪತ್ತು ಪರಿಹಾರ - ಎಚ್‌ಎಡಿಆರ್ ಹಾಗೂ ಶೋಧ ಮತ್ತು ರಕ್ಷಣೆ - ಎಸ್‌ಎಆರ್ ಕಾರ್ಯಾಚರಣೆಗಳಲ್ಲಿ ಭಾರತೀಯ ನೌಕಾಪಡೆಯ ತೊಡಗಿಸಿಕೊಳ್ಳುವಿಕೆ ಮತ್ತು ಯಶಸ್ಸು ಅಂತಾರಾಷ್ಟ್ರೀಯವಾಗಿ ಮೆಚ್ಚುಗೆ ಗಳಿಸಿದೆ ಎಂಬುದನ್ನೂ ಶಿಲ್ಪಾಕ್ ಅಂಬುಲೆ ಉಲ್ಲೇಖಿಸಿದರು. ಸಿಂಗಾಪುರ ನೌಕಾಪಡೆಯ ಸಹ ಆತಿಥ್ಯದಲ್ಲಿ ೨೦೨೩ರಲ್ಲಿ ನಡೆದ ಮೊದಲ ಆಸಿಯಾನ್-ಭಾರತ ನೌಕಾ ಅಭ್ಯಾಸ, ಸಂಘಟಿತ ಅಭ್ಯಾಸ ಮತ್ತು ಪರಸ್ಪರ ಅಧ್ಯಯನವನ್ನು ಉತ್ತೇಜಿಸಿದ ಪ್ರಾಮಾಣಿಕ ಪ್ರಯತ್ನಗಳ ಸಾಕ್ಷ್ಯವಾಗಿದೆ ಎಂದರು.

<><><><>

ಭವಿ?ದ ಒಪ್ಪಂದ ಮತ್ತು ಅದರ ಭಾಗಗಳಾದ ಜಾಗತಿಕ ಡಿಜಿಟಲ್ ಒಪ್ಪಂದ ಹಾಗೂ ಭವಿಷ್ಯದ ತಲೆಮಾರುಗಳ ಘೋಷಣೆಗೆ ತನ್ನ ಬದ್ಧತೆಯನ್ನು ವಿಶ್ವ ಸಂಸ್ಥೆಯ ಮೂರನೇ ಅನೌಪಚಾರಿಕ ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಭಾರತ ಪುನರುಚ್ಚರಿಸಿದೆ. ಈ ಸಂವಾದವು ಸದಸ್ಯ ರಾಷ್ಟ್ರಗಳ ನಡುವಿನ ಚರ್ಚೆಗೆ ವೇದಿಕೆ ಒದಗಿಸಿತು, ೨೦೨೮ರವರೆಗೆ ಈ ಒಪ್ಪಂದವನ್ನು ಹೇಗೆ ಅನುಷ್ಠಾನಗೊಳಿಸಬಹುದು ಎಂಬ ವಿಚಾರದಲ್ಲಿ ಅಭಿಪ್ರಾಯಗಳು ವಿನಿಮಯ ಮಾಡಿಕಳ್ಳಲಾಯಿತು. ಸಂವಾದದಲ್ಲಿ ಮಾತನಾಡಿದ ಭಾರತದ ವಿಶ್ವಸಂಸ್ಥೆ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್, 'ಇದೊಂದು ದೂರದೃಷ್ಟಿಯ, ಸಮಾವೇಶಾತ್ಮಕ ಅಂತರರಾಷ್ಟ್ರೀಯ ಸಹಕಾರದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ೨೦೨೮ ರ ವಿಮರ್ಶೆಯು ಸ್ಪಷ್ಟ ಗುರಿಯೊಂದಿಗೆ ನಡೆಯಬೇಕು,' ಎಂದು ಹೇಳಿದರು. ಭದ್ರತಾ ಮಂಡಳಿ ಸುಧಾರಣೆ ಮತ್ತು ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಪುನರ್ ವಿನ್ಯಾಸದ ಅಗತ್ಯವಿದೆ ಎಂಬ ಭಾರತದ ಧ್ವನಿಯನ್ನು ಅವರು ಪುನರುಚ್ಛರಿಸಿದರು. ದ್ವನಿ: ವಿಶ್ವಸಂಸ್ಥೆ ಪ್ರತಿನಿಧಿ ಪರ್ವತನೇನಿ ಹರೀಷ್ ಸಭೆಯಲ್ಲಿ ಭಾರತ, ಜಾಗತಿಕ ಡಿಜಿಟಲ್ ಒಪ್ಪಂದದ ಭಾಗವಾಗಿ, ಎಐ ನಿರ್ವಹಣೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ವಿಜ್ಞಾನ ಸಮಿತಿಯ ಸ್ಥಾಪನೆಯ ನಿರ್ಧಾರವನ್ನು ಸ್ವಾಗತಿಸಿದೆ.

<><><><>

ಲಾಸ್ ವೇಗಾಸ್‌ನಲ್ಲಿ ನಡೆಯುತ್ತಿರುವ ಚೆಸ್ ಫ್ರೀಸ್ಟೈಲ್ ಗ್ರ್ಯಾಂಡ್ ಸ್ಲ್ಯಾಮ್‌ನಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ೨೧ ವರ್ಷದ ಅರ್ಜುನ್ ಕ್ವಾರ್ಟರ್ ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ನೋಡಿರ್ಬೆಕ್ ಅಬ್ದುಸತ್ತೊರೊವ್ ಅವರನ್ನು ೧.೫-೦.೫ ಅಂತರದಿಂದ ಸೋಲಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>